ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಸಂಖ್ಯೆ: ಬೆವಿಕಂ/ನಿ(ಹ)ಪ್ರವ್ಯ(ಕಂ)/ಉಪ್ರವ್ಯ(ಕಂ)/ಸಪ್ರವ್ಯ(ಕಂ–1)/ಬಿಸಿ–22/2202(44)/2021–22
ಲಗತ್ತು: ಸರ್ಕಾರದ ಆದೇಶ

CKS-06

ಕಂಪನಿ ಕಾರ್ಯಾಲಯ
ಕೆ.ಆರ್.ವೃತ್ತ, ಬೆಂಗಳೂರು–1
ದಿನಾಂಕ: 13 SEP 2021

# ಸುತ್ತೋಲೆ

**ವಿಷಯ:** ರಾಜ್ಯದಲ್ಲಿರುವ ಸ್ಟಾರ್ ಕ್ಲಾಸಿಫೈಡ್ ಹೋಟೆಲ್‌ಗಳಿಗೆ "ಕೈಗಾರಿಕೆ" ಎಂದು ಸ್ಥಾನಮಾನ ನೀಡಿ ಕೈಗಾರಿಕೆ ದರದಲ್ಲಿ ವಿದ್ಯುತ್ ದರ ನಿಗದಿಪಡಿಸುವ ಬಗ್ಗೆ

**ಉಲ್ಲೇಖ:** ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಎನರ್ಜಿ 311 ಪಿಎಸ್‌ಆರ್ 2021 ಬೆಂಗಳೂರು, ದಿನಾಂಕ: 09.08.2021.

*****

ಘನ ಕರ್ನಾಟಕ ಸರ್ಕಾರವು, ಉಲ್ಲೇಖದಲ್ಲಿನ ಆದೇಶದಲ್ಲಿ ರಾಜ್ಯದಲ್ಲಿರುವ **ಸ್ಟಾರ್ ಕ್ಲಾಸಿಫೈಡ್ ಹೋಟೆಲ್‌ಗಳಿಗೆ ದಿನಾಂಕ 01.04.2021 ರಿಂದ 31.03.2026 ರವರೆಗೆ** (5 ವರ್ಷಗಳ ಅವಧಿ) **"ಕೈಗಾರಿಕೆ"** ಎಂದು ಸ್ಥಾನಮಾನ ನೀಡಿ ಆದೇಶಿಸಿರುವುದನ್ನು ಪರಿಗಣಿಸಿ, ಈ ಅವಧಿಯಲ್ಲಿ ಈ ಪ್ರವರ್ಗದ ವಿದ್ಯುತ್ ಗ್ರಾಹಕರುಗಳ ಸ್ಥಾವರಗಳಿಗೆ ಈ ಕೆಳಕಂಡಂತೆ ವಿದ್ಯುತ್ ದರ ನಿಗದಿಪಡಿಸಿದೆ.

1. ರಾಜ್ಯದಲ್ಲಿರುವ ಸ್ಟಾರ್ ಕ್ಲಾಸಿಫೈಡ್ ಹೋಟೆಲ್‌ಗಳಿಗೆ ದಿನಾಂಕ 01.04.2021 ರಿಂದ 31.03.2026 ರವರೆಗೆ (5 ವರ್ಷಗಳ ಅವಧಿಗೆ) ವಾಣಿಜ್ಯ ವಿದ್ಯುತ್ ದರದ ಬದಲಾಗಿ ಕೈಗಾರಿಕೆಗಳಿಗೆ ಅನ್ವಯಿಸುವ ವಿದ್ಯುತ್ ದರದಲ್ಲಿ ಬಿಲ್ಲುಗಳನ್ನು ನೀಡುವುದು. ಸದರಿ ರಿಯಾಯಿತಿಯು 31.03.2026 ಕ್ಕೆ ಅಂತ್ಯಗೊಳ್ಳುತ್ತದೆ.
2. ಸದರಿ ಸೌಲಭ್ಯಗಳು ಈ ಪ್ರವರ್ಗದ ವಿದ್ಯುತ್ ಗ್ರಾಹಕರುಗಳಿಗೆ ಒದಗಿಸಲು ಈ ಕೆಳಕಂಡಂತೆ ಕ್ರಮವಹಿಸತಕ್ಕದ್ದು:–

- ಈ ಪ್ರವರ್ಗದ ವಿದ್ಯುತ್ ಗ್ರಾಹಕರುಗಳು ದಿನಾಂಕ 01.04.2021 ರಂದು ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದಲ್ಲಿ ರಾಜ್ಯದ ಸ್ಟಾರ್ ಕ್ಲಾಸಿಫೈಡ್ ಹೋಟೆಲ್‌ಗಳೆಂದು ನೊಂದಾವಣೆಗೊಂಡು, ದಿನಾಂಕ 01.04.2021 ರಿಂದ 31.03.2026ರ ಅವಧಿಯವರೆಗೆ ಚಾಲ್ತಿಯಲ್ಲಿರುವ ನೊಂದಾವಣೆ ಪ್ರಮಾಣ ಪತ್ರವನ್ನು ಹೊಂದಿರತಕ್ಕದ್ದು.
- ದಿನಾಂಕ 01.04.2021 ರಿಂದ 31.03.2026ರ ಅವಧಿಯಲ್ಲಿ ವಿದ್ಯುತ್ ಸಂಪರ್ಕ ಪಡೆಯುವ ಈ ಪ್ರವರ್ಗದ ವಿದ್ಯುತ್ ಗ್ರಾಹಕರುಗಳಿಗೆ ಚಾಲ್ತಿಯಲ್ಲಿರುವ ನೊಂದಾವಣೆ ಪ್ರಮಾಣ ಪತ್ರವನ್ನು ಪಡೆದು, ನೊಂದಣಿಯಾದ ದಿನಾಂಕದಿಂದ 31.03.2026 ರ ಅವಧಿಯವರೆಗೆ ಈ ಸೌಲಭ್ಯವನ್ನು ಒದಗಿಸತಕ್ಕದ್ದು.
- ಈ ಪ್ರವರ್ಗದ ವಿದ್ಯುತ್ ಸ್ಥಾವರಗಳು ದಿನಾಂಕ 01.04.2021ರಂದು ಚಾಲ್ತಿಯಲ್ಲಿರತಕ್ಕದ್ದು ಹಾಗೂ ಸದರಿ ಸ್ಥಾವರಗಳ ದಿನಾಂಕ 31.03.2021ರ ಅಂತ್ಯಕ್ಕಿರುವ ವಿದ್ಯುತ್ ಬಾಕಿ ಮೊತ್ತವನ್ನು ಸಂಪೂರ್ಣವಾಗಿ ಪಾವತಿಸಿರತಕ್ಕದ್ದು.
- ಈ ಪ್ರವರ್ಗದ ವಿದ್ಯುತ್ ಗ್ರಾಹಕರುಗಳಿಗೆ ದಿನಾಂಕ 01.04.2021 ರಿಂದ 31.03.2026 ರವರೆಗೆ ಕಡಿಮೆಯಾಗುವ ವಿದ್ಯುತ್ ದರದ ಮೊತ್ತ (ವಾಣಿಜ್ಯ ಜಕಾತಿ ವಿದ್ಯುತ್ ದರ ಮತ್ತು ಕೈಗಾರಿಕೆ ಜಕಾತಿ ವಿದ್ಯುತ್ ದರಗಳ ನಡುವಿನ ವ್ಯತ್ಯಾಸದ ಮೊತ್ತ)ವನ್ನು ರಾಜ್ಯ ಸರ್ಕಾರವು ಭರಿಸುವುದಾಗಿದ್ದು, ಸದರಿ ಜಕಾತಿ ವಿದ್ಯುತ್ ದರದ ವ್ಯತ್ಯಾಸದ ಮೊತ್ತವನ್ನು ಪ್ರವಾಸೋದ್ಯಮ ಇಲಾಖೆಯು ಬೆವಿಕಂಗೆ ಪಾವತಿಸುವುದು.

- ಅರ್ಹ ಫಲಾನುಭವಿ ಗ್ರಾಹಕರಿಗೆ ವಾಣಿಜ್ಯ ಜಕಾತಿಯ ದರದ ಬದಲಾಗಿ ಕೈಗಾರಿಕೆ ಜಕಾತಿಗೆ ಬಿಲ್ಲ್ ಮಾಡಿ ವ್ಯತ್ಯಾಸದ ಮೊತ್ತವನ್ನು RAPDRP ಮತ್ತು TRM ತಂತ್ರಾಂಶದಲ್ಲಿ ಹೊಸದಾಗಿ ರಚಿಸಿರುವ **"Concession for 62 Star Classified Hotels( Difference of Commercial & industrial tariff) "** ಹೊಂದಾಣಿಕೆಯನ್ನು ಆಯ್ಕೆ ಮಾಡಿ ಹೊಂದಾಣಿಕೆ ನೀಡುವುದು. **ಪ್ರತಿ ತಿಂಗಳು ಪ್ರತ್ಯೇಕ ಹೊಂದಾಣಿಕೆ ನೀಡತಕ್ಕದ್ದು.**

- ವಾಣಿಜ್ಯ ಜಕಾತಿಯ ದರದ ಬದಲಾಗಿ ಕೈಗಾರಿಕೆ ಜಕಾತಿಗೆ ಬಿಲ್ಲ್ ಮಾಡಿ ವ್ಯತ್ಯಾಸದ ಮೊತ್ತವನ್ನು ಪ್ರವಾಸೋದ್ಯಮ ಇಲಾಖೆಯಿಂದ ಭರಿಸಲು ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿರುವುದರಿಂದ ರಿಯಾಯಿತಿ ಪಡೆದ ಗ್ರಾಹಕರ ವಿವರಗಳನ್ನು ಪ್ರತಿ ಮಾಹೆ 5 ನೇ ತಾರಿಖಿನೊಳಗೆ ನಿಗದಿತ ನಮೂನೆಯಲ್ಲಿ ಕ್ರೋಢೀಕರಿಸಿ ಲೆಕ್ಕಾಧಿಕಾರಿ (ಆಂ.ಪ) ರವರಿಂದ ದೃಢೀಕರಣ ಪಡೆದು ವಿಭಾಗೀಯ ಕಚೇರಿಯಿಂದ ಪ್ರಧಾನ ವ್ಯವಸ್ಥಾಪಕರು(ಕಂದಾಯ), ನಿಗಮ ಕಛೇರಿ ರವರಿಗೆ ತಪ್ಪದೇ 10ನೇ ತಾರೀಖಿನೊಳಗೆ ಸಲ್ಲಿಸುವುದು.

- ಸದರಿ ಗ್ರಾಹಕರಿಗೆ ನೀಡಲಾಗುವ ಬೇಡಿಕೆ/ನಿಗಧಿತ ಶುಲ್ಕದ ಹೊಂದಾಣಿಕೆಯು, ಡಿ.ಸಿ.ಬಿ. ವರದಿಯ ವಸೂಲಾತಿ ಅಂಕಣದಲ್ಲಿ ಹೊಂದಾಣಿಕೆಯಡಿಯಲ್ಲಿ ಬರುವುದರಿಂದ, ಮೇಲಿನ ಕಂಡಿಕೆಯಲ್ಲಿ ತಿಳಿಸಿರುವ ಆರ್.ಆರ್. ಸಂಖ್ಯೆವಾರು ವಿವರಗಳೊಂದಿಗೆ ಸೂಕ್ತ ಪರಿಶೀಲನೆ ನಡೆಸಿ ಡಿಸಿಬಿ ಮೊತ್ತಕ್ಕೆ ತಾಳೆ ಮಾಡುವುದು ಮತ್ತು ಲೆಕ್ಕ ಶೀರ್ಷಿಕೆ **" 28.1507 "** ರಲ್ಲಿ ಲೆಕ್ಕೀಕರಿಸುವುದು.

- ಹೊಂದಾಣಿಕೆ ವಿವರಗಳನ್ನು ಪ್ರತ್ಯೇಕ ರೆಜಿಸ್ಟರ್‌ನಲ್ಲಿ ನಿರ್ವಹಿಸುವುದು ಕಡ್ಡಾಯವಾಗಿರುತ್ತದೆ.

ಡಾ॥ ಆರ್.ಸಿ. ಚೇತನ್ IRS
ನಿರ್ದೇಶಕರು (ಹಣಕಾಸು)
ಬೆವಿಕಂ

ಪ್ರತಿಗಳು:

1. ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ.ಪ) ಬೆವಿಕಂ, ನಿಗಮ ಕಾರ್ಯಾಲಯ ರವರ ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ.
2. ಮುಖ್ಯ ಇಂಜಿನಿಯರ್(ವಿ)/ಲೆಕ್ಕನಿಯಂತ್ರಣಾಧಿಕಾರಿಗಳು, ಬೆವಿಕಂ, ವಾ, ಕಾ ಮತ್ತು ಪಾ, ಬೆಂ.ಮ.ಕ್ಷೇ ಉತ್ತರ/ದಕ್ಷಿಣ/ಬೆಂ.ಗ್ರಾ.ಕ್ಷೇ/ಚಿ.ಕ್ಷೇ ವಲಯ ಇವರಿಗೆ ಸೂಕ್ತ ಕ್ರಮಕ್ಕಾಗಿ.
3. ಪ್ರಧಾನ ವ್ಯವಸ್ಥಾಪಕರು (ಲೆ ಮತ್ತು ಜ) ಬೆವಿಕಂ, ನಿಗಮ ಕಾರ್ಯಾಲಯ ರವರ ಮಾಹಿತಿಗಾಗಿ ಹಾಗೂ ಲೆಕ್ಕೀಕರಿಸುವ ವಿಧಾನವನ್ನು ಕ್ಷೇತ್ರಾಧಿಕಾರಿಗಳಿಗೆ ಒದಗಿಸುವುದು.
4. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ)/ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಬೆವಿಕಂ, ವಾ, ಕಾ ಮತ್ತು ಪಾ, ವೃತ್ತ ಇವರಿಗೆ ಸೂಕ್ತ ಕ್ರಮಕ್ಕಾಗಿ.
5. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ಲೆಕ್ಕಾಧಿಕಾರಿಗಳು, ಬೆವಿಕಂ, ವಾ, ಕಾ ಮತ್ತು ಪಾ, ವಿಭಾಗ ಇವರಿಗೆ ಸೂಕ್ತ ಕ್ರಮಕ್ಕಾಗಿ.
6. ಎಲ್ಲಾ ವಿಭಾಗೀಯ ಲೆಕ್ಕಾಧಿಕಾರಿ(ಆಂ.ಪ) ಶಾಖೆ, ಬೆವಿಕಂ ರವರ ಸೂಕ್ತ ಕ್ರಮಕ್ಕಾಗಿ.
7. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ಸಹಾಯಕ ಲೆಕ್ಕಾಧಿಕಾರಿಗಳು, ಬೆವಿಕಂ, ವಾ, ಕಾ ಮತ್ತು ಪಾ, ಉಪ-ವಿಭಾಗ ಇವರಿಗೆ ಸೂಕ್ತ ಕ್ರಮಕ್ಕಾಗಿ.
8. ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ತಾಂತ್ರಿಕ) ಇವರ ಆಪ್ತ ಕಾರ್ಯದರ್ಶಿಗಳು ಬೆವಿಕಂ, ನಿಗಮ ಕಾರ್ಯಾಲಯ.
9. ಮಹಾಕಡತ/ಕಡತ

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ರಾಜ್ಯದಲ್ಲಿರುವ ಸ್ಟಾರ್ ಕ್ಲಾಸಿಫೈಡ್ ಹೋಟೆಲ್ ಗಳಿಗೆ "ಕೈಗಾರಿಕೆ" ಸ್ಥಾನಮಾನ ನೀಡಿರುವ ಹಿನ್ನೆಲೆಯಲ್ಲಿ ಕೈಗಾರಿಕೆ ದರದಲ್ಲಿ ವಿದ್ಯುಚ್ಛಕ್ತಿ ದರ ನಿಗದಿಪಡಿಸುವ ಕುರಿತು.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಸಿಐ/86/ಎಸ್‌ಪಿಐ/2021, ದಿನಾಂಕ: 04.03.2021.
2. ಸರ್ಕಾರದ ಆದೇಶ ಸಂಖ್ಯೆ: ಟಿಓಆರ್/162/ಟಿಡಿಓ/2020, ದಿನಾಂಕ: 18.06.2021.
3. ಸರ್ಕಾರದ ಕಾರ್ಯದರ್ಶಿಗಳು, ಪ್ರವಾಸೋದ್ಯಮ ಇಲಾಖೆ ರವರ ಅಧ್ಯಕ್ಷತೆಯಲ್ಲಿ ದಿನಾಂಕ: 24.06.2021 ರಂದು ನಡೆದ ಸಭೆಯ ನಡವಳಿ.
4. ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ ಇವರ ಏಕ ಕಡತ ಸಂಖ್ಯೆ: DT-PLN7/6/2021.

<u>ಪ್ರಸ್ತಾವನೆ:</u>

1. ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ರಾಜ್ಯದಲ್ಲಿನ ಸ್ಟಾರ್ ಕ್ಲಾಸಿಫೈಡ್ ಹೋಟೆಲ್‌ಗಳನ್ನು ದಿನಾಂಕ: 01.04.2021 ರಿಂದ "ಕೈಗಾರಿಕೆ" ಎಂದು ಸ್ಥಾನಮಾನ ನೀಡಿ ಆದೇಶ ಹೊರಡಿಸಲಾಗಿದೆ.
2. ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದಲ್ಲಿ ರಾಜ್ಯದಲ್ಲಿನ ಸ್ಟಾರ್ ಕ್ಲಾಸಿಫೈಡ್ ಹೋಟೆಲ್‌ಗಳನ್ನು ದಿನಾಂಕ: 01.04.2021 ರಿಂದ "ಕೈಗಾರಿಕೆ" ಎಂದು ಸ್ಥಾನಮಾನ ನೀಡಿ, ಪ್ರಮಾಣ ಪತ್ರವನ್ನು ನೀಡುವ ಹಾಗೂ ಮಾರ್ಗಸೂಚಿಗಳನ್ನು ತಯಾರಿಸುವ ಸಂಬಂಧ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿರುತ್ತದೆ.
3. ಮೇಲೆ ಓದಲಾದ ಕ್ರಮ ಸಂಖ್ಯೆ (3)ರಲ್ಲಿ ರಾಜ್ಯದಲ್ಲಿನ ಸ್ಟಾರ್ ಕ್ಲಾಸಿಫೈಡ್ ಹೋಟೆಲ್‌ಗಳಿಗೆ "ಕೈಗಾರಿಕೆ" ಸ್ಥಾನಮಾನ ನೀಡಲು ಮಾರ್ಗಸೂಚಿಗಳನ್ನು ತಯಾರಿಸುವ ಸಂಬಂಧ ಕಾರ್ಯದರ್ಶಿಗಳು, ಪ್ರವಾಸೋದ್ಯಮ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 24.06.2021ರಂದು ಸಭೆಯಲ್ಲಿ ಈ ಕೆಳಕಂಡ ತೀರ್ಮಾನಗಳನ್ನು ತೆಗೆದುಕೊಳ್ಳಲಾಯಿತು.
    - ಸ್ಟಾರ್ ವರ್ಗೀಕೃತ ಹೋಟೆಲ್‌ಗಳಿಗೆ ಕೈಗಾರಿಕೆ ಸ್ಥಾನಮಾನ ನೀಡಿ, ಕೈಗಾರಿಕೆ ದರಗಳಲ್ಲಿ ಆಸ್ತಿ ತೆರಿಗೆ ವಿಧಿಸುವ ಸಂಬಂಧ, ಬಿ.ಬಿ.ಎಂ.ಪಿ, ನಗರಾಭಿವೃದ್ಧಿ ಇಲಾಖೆ, ಪೌರಾಡಳಿತ ಇಲಾಖೆ ಮತ್ತು ಪಂಚಾಯತ್ ರಾಜ್ ಇಲಾಖೆ

ವ್ಯಾಪ್ತಿಯಲ್ಲಿ ಬರುವ ಸ್ಟಾರ್ ಹೋಟೆಲ್‌ಗಳಿಗೆ ಕೈಗಾರಿಕೆ ದರಗಳನ್ನು ವಿಧಿಸುವ ಬಗ್ಗೆ ಅಗತ್ಯ ಕ್ರಮವನ್ನು ವಹಿಸುವಂತೆ ಸೂಚಿಸಲಾಯಿತು.

- ಕಾರ್ಯದರ್ಶಿಗಳು, ಪ್ರವಾಸೋದ್ಯಮ ಇಲಾಖೆ ರವರು ದಿನಾಂಕ: 01.04.2021 ರಿಂದ ಅನ್ವಯವಾಗುವಂತೆ ಸ್ಟಾರ್ ವರ್ಗೀಕೃತ ಹೋಟೆಲ್‌ಗಳಿಗೆ ಸಂಬಂಧಿಸಿದಂತೆ, ಆಸ್ತಿ ತೆರಿಗೆ ಮತ್ತು ವಿದ್ಯುತ್ ದರವನ್ನು ಅಳವಡಿಸಲು, ಇಂಧನ ಇಲಾಖೆ, ಬಿ.ಬಿ.ಎಂ.ಪಿ. ನಗರಾಭಿವೃದ್ಧಿ ಇಲಾಖೆ, ಪೌರಾಡಳಿತ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರುಗಳಿಗೆ ಮಾಹಿತಿಯನ್ನು ಒದಗಿಸುವಂತೆ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ ರವರಿಗೆ ಸೂಚಿಸಿದರು ಹಾಗೂ ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದಿಂದ ಪಡೆದಿರುವ ಸ್ಟಾರ್ ವರ್ಗೀಕೃತ ಪ್ರಮಾಣ ಪತ್ರವನ್ನು ಒದಗಿಸುವ ಸ್ಟಾರ್ ಹೋಟೆಲ್‌ಗಳಿಗೆ ಕೈಗಾರಿಕೆಗೆ ಅನ್ವಯವಾಗುವ ಆಸ್ತಿ ತೆರಿಗೆ ಮತ್ತು ವಿದ್ಯುತ್ ದರವನ್ನು ಅಳವಡಿಸಿ, ಈ ಇಲಾಖೆಗಳು ಅಧಿಸೂಚನೆ ಹೊರಡಿಸಲು ಜರೂರು ಕ್ರಮವಹಿಸುವಂತೆ ಸೂಚಿಸಲಾಯಿತು.

4. ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಏಕ ಕಡತದಲ್ಲಿ ರಾಜ್ಯದಲ್ಲಿರುವ ಸ್ಟಾರ್ ಕ್ಲಾಸಿಫೈಡ್ ಹೋಟೆಲ್‌ಗಳಿಗೆ ಕೈಗಾರಿಕೆ ಸ್ಥಾನಮಾನ ನೀಡುವ ಸಂಬಂಧ ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದ ವೆಬ್-ಸೈಟ್ ನಲ್ಲಿ ನೊಂದಣಿಯಾಗಿರುವ ರಾಜ್ಯದ 62 ಸ್ಟಾರ್ ಕ್ಲಾಸಿಫೈಡ್ ಹೋಟೆಲ್‌ಗಳ ಪೈಕಿ, 45 ಹೋಟೆಲ್‌ಗಳು ಮಾಹಿತಿ ಮತ್ತು ದಾಖಲೆಗಳನ್ನು ಸಲ್ಲಿಸಿದ್ದು, ಸದರಿ 45 ಸ್ಟಾರ್ ಕ್ಲಾಸಿಫೈಡ್ ಹೋಟೆಲ್‌ಗಳಿಗೆ ಹಾಗೂ ಇನ್ನು ಮುಂದೆ ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದಲ್ಲಿ ನೊಂದಣಿಯಾಗುವ ರಾಜ್ಯದ ಸ್ಟಾರ್ ಕ್ಲಾಸಿಫೈಡ್ ಹೋಟೆಲ್‌ಗಳಿಗೆ ಮೇಲೆ ತಿಳಿಸಿರುವ ಸರ್ಕಾರಿ ಆದೇಶಗಳಂತೆ ಹಾಗೂ ಸಭೆಯ ನಡವಳಿಗಳಂತೆ ಇಲಾಖೆ / ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಸ್ಟಾರ್ ಕ್ಲಾಸಿಫೈಡ್ ಹೋಟೆಲ್‌ಗಳಿಗೆ ದಿನಾಂಕ: 01.04.2021 ರಿಂದ 5 ವರ್ಷಗಳ ಅವಧಿವರೆಗೆ ಜಾರಿಗೆ ಬರುವಂತೆ ಕೈಗಾರಿಕೆ ಸ್ಥಾನಮಾನ ನೀಡಿ, ಕೈಗಾರಿಕೆ ದರಗಳಲ್ಲಿ ಆಸ್ತಿ ತೆರಿಗೆ ಮತ್ತು ವಿದ್ಯುಚ್ಛಕ್ತಿ ದರವನ್ನು ಅಳವಡಿಸಲು ಆದೇಶ ಹೊರಡಿಸುವಂತೆ ಕೋರಿದೆ.
5. ದಿನಾಂಕ: 01.04.2021 ರಂದು ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದಲ್ಲಿ ರಾಜ್ಯದ ಸ್ಟಾರ್ ಕ್ಲಾಸಿಫೈಡ್ ಹೋಟೆಲ್‌ಗಳೆಂದು ನೊಂದಾವಣೆಗೊಂಡು, ದಿನಾಂಕ: 01.04.2021 ರಿಂದ 31.03.2026ರ ಅವಧಿಯವರೆಗೆ ಚಾಲ್ತಿಯಲ್ಲಿರುವ ನೊಂದಾವಣೆ ಪ್ರಮಾಣ ಪತ್ರವನ್ನು ಹೊಂದಿರುವ ರಾಜ್ಯದ ಸ್ಟಾರ್ ಕ್ಲಾಸಿಫೈಡ್ ಹೋಟೆಲ್‌ಗಳಿಗೆ ಹಾಗೂ ಈ ಅವಧಿಯಲ್ಲಿ ವಿದ್ಯುತ್ ಸಂಪರ್ಕ ಹೊಂದುವ ಈ ಪ್ರವರ್ಗದ ವಿದ್ಯುತ್ ಗ್ರಾಹಕರುಗಳಿಗೆ ವಾಣಿಜ್ಯ ವಿದ್ಯುತ್ ದರದ

ಬದಲಾಗಿ ಕೈಗಾರಿಕೆ ವಿದ್ಯುತ್ ದರವನ್ನು 01.04.2021 ರಿಂದ 31.03.2026ರ (5 ವರ್ಷಗಳ ಅವಧಿ) ವರೆಗೆ ವಿಧಿಸಲು ಪ್ರಸ್ತಾಪಿಸಿದ್ದು, ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಎನರ್ಜಿ 311 ಪಿಎಸ್‌ಆರ್ 2021**
**ಬೆಂಗಳೂರು, ದಿನಾಂಕ: 09.08.2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಹಾಗೂ ರಾಜ್ಯದಲ್ಲಿರುವ ಸ್ಟಾರ್ ಕ್ಲಾಸಿಫೈಡ್ ಹೋಟೆಲ್‌ಗಳಿಗೆ ದಿನಾಂಕ: 01.04.2021 ರಿಂದ 31.03.2026 ರವರೆಗೆ (5 ವರ್ಷಗಳ ಅವಧಿ) "ಕೈಗಾರಿಕೆ" ಎಂದು ಸ್ಥಾನಮಾನ ನೀಡಿ ಆದೇಶಿಸಿರುವುದನ್ನು ಪರಿಗಣಿಸಿ, ಈ ಅವಧಿಯಲ್ಲಿ ಈ ಪ್ರವರ್ಗದ ವಿದ್ಯುತ್ ಗ್ರಾಹಕರುಗಳ ಸ್ಥಾವರಗಳಿಗೆ ಈ ಕೆಳಕಂಡಂತೆ ವಿದ್ಯುತ್ ದರ ನಿಗದಿಪಡಿಸಿದೆ.

1. **ರಾಜ್ಯದಲ್ಲಿರುವ ಸ್ಟಾರ್ ಕ್ಲಾಸಿಫೈಡ್ ಹೋಟೆಲ್‌ಗಳಿಗೆ ದಿನಾಂಕ: 01.04.2021 ರಿಂದ 31.03.2026 ರವರೆಗೆ (5 ವರ್ಷಗಳ ಅವಧಿಗೆ) ವಾಣಿಜ್ಯ ವಿದ್ಯುತ್ ದರದ ಬದಲಾಗಿ ಕೈಗಾರಿಕೆಗಳಿಗೆ ಅನ್ವಯಿಸುವ ವಿದ್ಯುತ್ ದರದಲ್ಲಿ ಬಿಲ್ಲುಗಳನ್ನು ನೀಡಲಾಗುವುದು.**
2. **ಸದರಿ ಸೌಲಭ್ಯಗಳು ಈ ಪ್ರವರ್ಗದ ವಿದ್ಯುತ್ ಗ್ರಾಹಕರುಗಳಿಗೆ ಒದಗಿಸಲು ಈ ಕೆಳಕಂಡಂತೆ ಕ್ರಮವಹಿಸತಕ್ಕದ್ದು:-**
    - ಈ ಪ್ರವರ್ಗದ ವಿದ್ಯುತ್ ಗ್ರಾಹಕರುಗಳು ದಿನಾಂಕ: 01.04.2021 ರಂದು ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದಲ್ಲಿ ರಾಜ್ಯದ ಸ್ಟಾರ್ ಕ್ಲಾಸಿಫೈಡ್ ಹೋಟೆಲ್‌ಗಳೆಂದು ನೊಂದಾವಣೆಗೊಂಡು, ದಿನಾಂಕ: 01.04.2021 ರಿಂದ 31.03.2026ರ ಅವಧಿಯವರೆಗೆ ಚಾಲ್ತಿಯಲ್ಲಿರುವ ನೊಂದಾವಣೆ ಪ್ರಮಾಣ ಪತ್ರವನ್ನು ಹೊಂದಿರತಕ್ಕದ್ದು.
    - ದಿನಾಂಕ: 01.04.2021 ರಿಂದ 31.03.2026ರ ಅವಧಿಯಲ್ಲಿ ವಿದ್ಯುತ್ ಸಂಪರ್ಕ ಪಡೆಯುವ ಈ ಪ್ರವರ್ಗದ ವಿದ್ಯುತ್ ಗ್ರಾಹಕರುಗಳಿಗೆ ಚಾಲ್ತಿಯಲ್ಲಿರುವ ನೊಂದಾವಣೆ ಪ್ರಮಾಣ ಪತ್ರವನ್ನು ಪಡೆದು, ನೊಂದಣೆಯಾದ ದಿನಾಂಕದಿಂದ 31.03.2026ರ ಅವಧಿಯವರೆಗೆ ಈ ಸೌಲಭ್ಯವನ್ನು ಒದಗಿಸತಕ್ಕದ್ದು.
    - ಈ ಪ್ರವರ್ಗದ ವಿದ್ಯುತ್ ಸ್ಥಾವರಗಳು ದಿನಾಂಕ: 01.04.2021ರಂದು ಚಾಲ್ತಿಯಲ್ಲಿರತಕ್ಕದ್ದು ಹಾಗೂ ಸದರಿ ಸ್ಥಾವರಗಳ ದಿನಾಂಕ: 31.03.2021ರ ಅಂತ್ಯಕ್ಕಿರುವ ವಿದ್ಯುತ್ ಬಾಕಿ ಮೊತ್ತವನ್ನು ಸಂಪೂರ್ಣವಾಗಿ ಪಾವತಿಸಿರತಕ್ಕದ್ದು.

- ಈ ಪ್ರವರ್ಗದ ವಿದ್ಯುತ್ ಗ್ರಾಹಕರುಗಳಿಗೆ ದಿನಾಂಕ: 01.04.2021 ರಿಂದ 31.03.2026 ರವರೆಗೆ ಕಡಿಮೆಯಾಗುವ ವಿದ್ಯುತ್ ದರದ ಮೊತ್ತ (ವಾಣಿಜ್ಯ ಜಕಾತಿ ವಿದ್ಯುತ್ ದರ ಮತ್ತು ಕೈಗಾರಿಕೆ ಜಕಾತಿ ವಿದ್ಯುತ್ ದರಗಳ ನಡುವಿನ ವ್ಯತ್ಯಾಸದ ಮೊತ್ತ) ವನ್ನು ರಾಜ್ಯ ಸರ್ಕಾರವು ಭರಿಸುವುದಾಗಿದ್ದು, ಈ ಸಂಬಂಧ, ವಿದ್ಯುತ್ ಸರಬರಾಜು ಕಂಪನಿಗಳು ಈ ಪ್ರವರ್ಗದ ವಿದ್ಯುತ್ ಗ್ರಾಹಕರುಗಳಿಂದ ಬರಬೇಕಾದ ಜಕಾತಿ ವಿದ್ಯುತ್ ದರದ ವ್ಯತ್ಯಾಸದ ಮೊತ್ತಕ್ಕೆ ಪ್ರತಿ ಮಾಹೆಯಲ್ಲಿ ಪ್ರವಾಸೋದ್ಯಮ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.
- ಪ್ರವಾಸೋದ್ಯಮ ಇಲಾಖೆಯಿಂದ ಈ ಪ್ರವರ್ಗದ ವಿದ್ಯುತ್ ಗ್ರಾಹಕರುಗಳಿಗೆ ವಿದ್ಯುತ್ ದರದಲ್ಲಿ ಒದಗಿಸುವ ರಿಯಾಯ್ತಿಯ ಮೊತ್ತ (ಜಕಾತಿ ದರದ ವ್ಯತ್ಯಾಸದ ಮೊತ್ತ) ವನ್ನು ವಿದ್ಯುತ್ ಸರಬರಾಜು ಕಂಪನಿಗಳಿಗೆ ಪಾವತಿಸುವುದಾಗಿರುತ್ತದೆ.

3. ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ: FD-496 Exp-7/2020 ದಿನಾಂಕ: 19.01.2021ರಲ್ಲಿ ಪ್ರವಾಸೋದ್ಯಮ ಇಲಾಖೆಗೆ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

9/8/21

(ಅಪರ್ಣಾ ಪಾವಟೆ)
ಸರ್ಕಾರದ ಅಪರ ಕಾರ್ಯದರ್ಶಿ
ಇಂಧನ ಇಲಾಖೆ.
9/8/21

<u>ಇವರಿಗೆ:</u>

1. ಮಹಾಲೇಖಪಾಲರು (ಎ&ಇ) / (ಲೆಕ್ಕಪರಿಶೋಧನೆ–1 & ಲೆಕ್ಕಪರಿಶೋಧನೆ–2) ಕರ್ನಾಟಕ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಬೆವಿಕಂ, ಮವಿಕಂ, ಹುವಿಕಂ, ಗುವಿಕಂ ಮತ್ತು ಚಾವಿಸನಿನಿ.
3. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
4. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.

6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
7. ಸರ್ಕಾರದ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಪ್ರವಾಸೋದ್ಯಮ ಇಲಾಖೆ, ವಿಕಾಸ ಸೌಧ, ಬೆಂಗಳೂರು.
8. ಕಾರ್ಯದರ್ಶಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, #16, ಸಿ–1, ಮಿಲ್ಲರ್ಸ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–52.
9. ವ್ಯವಸ್ಥಾಪಕ ನಿರ್ದೇಶಕರ ಆಪ್ತ ಕಾರ್ಯದರ್ಶಿ, ಕವಿಪ್ರನಿನಿ/ಕವಿನಿನಿ/ಪಿಸಿಕೆಎಲ್/ಕ್ರೆಡಲ್.
10. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
11. ಸರ್ಕಾರದ ಅಧೀನ ಕಾರ್ಯದರ್ಶಿ ರವರ ಆಪ್ತ ಸಹಾಯಕರು, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
12. ಶಾಖಾರಕ್ಷಾ ಕಡತ / ಹೆಚ್ಚುವರಿ ಪ್ರತಿ.